ಕೆಳಗಿಳಿದ ಭದ್ರಪ್ಪನವರು, ಪೊಲೀಸರು ಅವರಿವರನ್ನು ಪಕ್ಕಕ್ಕೆ ತಳ್ಳಿ ಮಾಡಿಕೊಟ್ಟ ದಾರಿಯಲ್ಲಿ ನಡೆಯುತ್ತ, ನಮಗಷ್ಟೇ ಅಲ್ಲ, ವೀರಾಂಜನೇಯಸ್ವಾಮಿಗೂ ಅತೀವ ಭಕ್ತಿಯಿಂದ ಕೈಜೋಡಿಸಿ ನಮಿಸುತ್ತ ದೇವಸ್ಥಾನವನ್ನು ತಲಪಿದ್ದೇ ತಡ, ಅರ್ಚಕರು ಮಂಗಳಾರತಿ ಮಾಡಿ, ದೇವರ ಮೇಲಿದ್ದ ಹಾರಕ್ಕಿಂತ ಎರಡು ಪಟ್ಟು ದಪ್ಪಗಿದ್ದ ಹೂವಿನ ಹಾರವನ್ನು ಅವರ ಕೊರಳಿಗೆ ಹಾಕಿ ಒಂದು ಕೈಯಿಗೆ ತುರಾಯಿಯನ್ನೂ ಇನ್ನೊಂದು ಕೈಯಿಗೆ ಒಂದು ಬೆಳ್ಳಿಯ ಗದೆಯನ್ನೂ ಕೊಟ್ಟು ಕೈಮುಗಿದರು. ಆಮೇಲೆ ಅರ್ಧ ಫರ್ಲಾಂಗಿಗೆ ಒಬ್ಬೊಬ್ಬರಂತೆ ಹಣ್ಣು ತರಕಾರಿ ಅಂಗಡಿಯ ಸಿದ್ದೇಶ್ವರ, ಪಾನಿಪೂರಿ ಗಾಡಿಯ ಕಿಟ್ಟಿ, ಹೂವಿನಂಗಡಿಯ ಸರೋಜಮ್ಮ, ಪಂಚರ್ ಹಾಕುವ ಲತೀಫ್, ನಮಗೆ ಗುರುತು ಸಿಕ್ಕದ ಇನ್ನೂ ಕೆಲವರು ಹೇಗೋ ದಾರಿಮಾಡಿಕೊಂಡು ಬಂದು ಟ್ರಕ್ಕಿಗೆ ಆನಿಸಿಟ್ಟ ಏಣಿಯನ್ನು ಹತ್ತಿ ಭದ್ರಪ್ಪನವರಿಗೆ ಹಾರ ಹಾಕಿ, ನಿಂಬೆಹಣ್ಣುಗಳನ್ನು ಕೊಟ್ಟು ಕೈಮುಗಿದು ಅವರಿಂದಲೂ ಕೈಮುಗಿಸಿಕೊಂಡರು.

ಮೆರವಣಿಗೆ ಕಡೆಗೆ ತಲುಪಲಿದ್ದ ನಮ್ಮ ನಗರದಾಚೆಯ ಬಯಲಿನಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ಕುಳಿತುಕೊಳ್ಳಬಹುದಾದಷ್ಟು ಭಾರೀ ಪೆಂಡಾಲು ಸಿದ್ಧವಾಗಿತ್ತು. ಆ ಪೆಂಡಾಲನ್ನು ಎತ್ತಿ ನಿಲ್ಲಿಸಿದ್ದ ಕಂಬಗಳು ಪಕ್ಷದ ಬಾವುಟಗಳಿಂದ, ಹಾಲುಬೆಳಕು ಚೆಲ್ಲುವ ಟ್ಯೂಬುಲೈಟುಗಳಿಂದ, ಬಾಳೆಕಂದು, ಮಾವಿನೆಲೆ, ಚಂಡು ಹೂವುಗಳಿಂದ ಅಲಂಕರಣಗೊಂಡಿದ್ದವು. ಕಂಬದಿಂದ ಕಂಬಕ್ಕೆ ಗೋಡೆಯಾಗುವಂತೆ ಕಟ್ಟಿದ್ದ ಕಾವಿ ಬಣ್ಣದ ದಪ್ಪ ಬಟ್ಟೆಯಷ್ಟೇ ಅಲ್ಲ, ಮೇಲೆ ಛಾವಣಿಯಾಗಿದ್ದ ಬೆಳ್ಳಗಿನ ಬಟ್ಟೆಯೂ ಜೋರಾಗಿ ಬೀಸುತ್ತಿದ್ದ ಗಾಳಿಗೆ ಟಪಟಪವೆನ್ನುತ್ತಿದ್ದವು. ವೇದಿಕೆಯಲ್ಲಿ ಎಡದಿಂದ ಬಲಕ್ಕೆ ಸಾಲಾಗಿ ಇರಿಸಲಾಗಿದ್ದ ಕುರ್ಚಿಗಳು. ಒಂದು ಬದಿಯಲ್ಲಿ ಪೋಡಿಯಂ, ಇನ್ನೊಂದು ಬದಿಯಲ್ಲಿ ಉರಿಯುತ್ತಿದ್ದ ಕಂಚಿನ ದೀಪಸ್ತಂಭ. ಹಿಂಬದಿಯಲ್ಲಿ ಮಂತ್ರಿ ಭದ್ರಪ್ಪನವರ ಬಹುದೊಡ್ಡ ಫೋಟೊ ಇದ್ದ ಬ್ಯಾನರ್. ವೇದಿಕೆಯ ಮುಂದೆ ಉದ್ದಕ್ಕೂ ಇಟ್ಟಿದ್ದ ಪಾಟುಗಳಲ್ಲಿ ಬಣ್ಣಬಣ್ಣದ ಕ್ರೋಟನ್.

ಪೊಲೀಸರು ಇಡೀ ಪೆಂಡಾಲು ವೇದಿಕೆ ಪೋಡಿಯಂ ಲೌಡ್ ಸ್ಪೀಕರುಗಳು ಹೂಹಾರಗಳು ಪಕ್ಷದ ಲಾಂಛನವಿದ್ದ ಉತ್ತರೀಯಗಳು ಹೂವಿನಲಂಕಾರಗಳು ತೋರಣಗಳು ಹೂಕುಂಡಗಳು ಫ್ಲೆಕ್ಸ್‌ಬೋರ್ಡುಗಳು ಮಿನರಲ್ ವಾಟರ್ ಬಾಟಲುಗಳು ಕುರ್ಚಿಗಳು, ಅವಕ್ಕೆ ಹೊದಿಸಿದ್ದ ಬಟ್ಟೆಗಳು ಎಲ್ಲವನ್ನೂ ತಪಾಸಣೆ ನಡೆಸಿದರು. ಅವರ ಜೊತೆಗೇ ಬಂದ ಟೈಗರ್, ಥಂಡರ್ ಪ್ರತಿಯೊಂದನ್ನೂ ಪ್ರತಿಯೊಬ್ಬರನ್ನೂ ಇಂಚು ಕೂಡ ಬಿಡದೆ ಮೂಸಿ ನೋಡಿದವು; ಏನೂ ಅಪಾಯವಿಲ್ಲವೆನ್ನುವಂತೆ ಪರಸ್ಪರ ಒಂದನ್ನೊಂದು ನೋಡಿಕೊಂಡವು; ಸರಪಳಿ ಹಿಡಿದುಕೊಂಡಿದ್ದ ಪೊಲೀಸರ ಬಳಿ ಸಾರಿ, ನಾಲಗೆ ಹೊರಹಾಕಿ ಅವರ ಕೈ ನೆಕ್ಕಿ ಬಾಲ ಅಲ್ಲಾಡಿಸಿದವು. ಸ್ವಲ್ಪ ಹೊತ್ತಾದ ಮೇಲೆ ಪೊಲೀಸರು ಪೆಂಡಾಲಿಗೆ ತುಸು ದೂರದಲ್ಲಿದ್ದ ಮತ್ತಿ ಮರದ ನೆರಳಿನಲ್ಲಿ ಎರಡು ಕುರ್ಚಿಗಳನ್ನು ಹಾಕಿಕೊಂಡು ಕೂತಾಗ ಅವರ ಬಳಿಯಲ್ಲೇ ನೆಲಕ್ಕೊರಗಿ ಮುಂಗಾಲುಗಳ ಮೇಲೆ ಮೂತಿ ಇಟ್ಟುಕೊಂಡು ಕಣ್ಣು ಮುಚ್ಚಿಕೊಂಡವು.

ಪೊಲೀಸ್ ಇಲಾಖೆಯ ಶ್ವಾನಪಡೆಯಲ್ಲೇ ಅತ್ಯಂತ ಚುರುಕಾಗಿದ್ದ ನಾಯಿಗಳೆಂದರೆ ಈ ಟೈಗರ್ ಮತ್ತು ಥಂಡರ್. ಗ್ವಾಲಿಯರಿನ ಬಿಎಸ್‌ಎಫ್ ಅಕಾಡೆಮಿಯಲ್ಲಿ ತರಬೇತಿ ಪಡೆದು ಬಂದಿದ್ದ ಈ ನಾಯಿಗಳು ಐದಾರು ವರ್ಷ ಸೆಂಟ್ರಲ್ ಜೈಲಿನ ಕೈದಿಗಳು ಅತ್ತಿತ್ತ ಅಡ್ಡಾಡದಂತೆ ಕಾವಲು ಕಾದಿದ್ದವು. ಆಮೇಲೆ ಕೊಲೆ, ಸುಲಿಗೆ, ಡಯಾಯಿತಿ, ಕಳ್ಳಸಾಗಣೆ, ಡ್ರಗ್ಸ್‌ಗಳ ದಂಧೆ, ಗೂಂಡಾಗಿರಿ, ಅತ್ಯಾಚಾರ, ಹೀಗೆ ಎಷ್ಟೆಲ್ಲ ಅಪರಾಧಗಳನ್ನು ಗುರುತಿಸಿ, ಅದೆಷ್ಟು ಅಪರಾಧಿಗಳನ್ನು ಹಿಡಿದುಕೊಟ್ಟಿಲ್ಲ. ಅವು ಇನ್ನೂ ಎಳೆಯವಾಗಿದ್ದಾಗಲೇ ಅವುಗಳಿಗೆ ಏನೇನು ಕೌಶಲಗಳು ಬೇಕಿತ್ತೋ ಅವುಗಳನ್ನೆಲ್ಲ, ಉದಾಹರಣೆಗೆ ಕೂತುಕೋ ನಿಲ್ಲು ಮಲಗು ಓಡು ಮೂಸು ಇತ್ಯಾದಿ ಸರಳ ಆದೇಶಗಳನ್ನೆಲ್ಲ ಪಾಲಿಸುವುದನ್ನು, ಹೇಳಿದಂತೆ ಕೇಳುವ ನಿಷ್ಠೆಯನ್ನು ಕಲಿಸಿಕೊಡಲಾಗಿತ್ತು. ಕ್ರಮೇಣ ಅಪರಾಧಿಯ ಜಾಡು ಹಿಡಿಯುವ, ಅಪರಾಧಿಯನ್ನು ಗುರುತಿಸುವ, ಅವನು ತಪ್ಪಿಸಿಕೊಳ್ಳದಂತೆ ಕಾಯುವ ತರಬೇತಿ. ಅವು ಎದುರಿಸಿದ ಅಂತಿಮ ಪರೀಕ್ಷೆಯೆಂದರೆ ತರಬೇತಿಯ ಪಾಳಯಕ್ಕೆ ಕರೆದೊಯ್ಯುವುದಲ್ಲ. ಹೇಗಿದ್ದರೂ ಅಲ್ಲಿ ಅದರ ತಪ್ಪುಗಳನ್ನು ತಿದ್ದುವ ತರಬೇತುದಾರರಿದ್ದರಲ್ಲ. ಅಂತಿಮ ಪರೀಕ್ಷೆಯೆಂದರೆ